ಉದಯವಾಣಿ ಸೋಮವಾರ 25 ಆಗಸ್ಟ್ 2014

# ಐಸಿರಿ

ದಿವಂಗತ ರಾಜೀವ ಗಾಂಧಿಯವರ ನಂತರ 1984 ರಿಂದ ನಮ್ಮ ದೇಶವನ್ನು ಏಕಪಕ್ಷೀಯ ಸರ್ಕಾರ ಆಡಳಿತವನ್ನು ನಡೆಸಿಲ್ಲ. ಅಬ್ ಕೀ ಬಾರ್ ಮೋದಿ ಸರ್ಕಾರ್ ಎಂದು ದೇಶದೆಲ್ಲೆಡೆ ಭರ್ಜರಿಯಾಗಿ ಪ್ರಚಾರ ನಡೆಸಿದ ನರೇಂದ್ರ ಮೋದಿ ನಮ್ಮ ರಾಷ್ಟ್ರದ ಪ್ರಧಾನಿ ಮಂತ್ರಿಎಂಬ ಸಿಂಹಾಸನದ ಗದ್ದುಗೆ ಏರಿದ್ದಾರೆ. ಅವರು ಸರ್ಕಾರವನ್ನು ರಚಿಸುತ್ತಾರೆ ಎಂದ ದಿನದಿಂದಲೂ FIIಗಳ ಹಣವಂತೂ ಹರಿದು ಬರುತ್ತಲೇ ಇದೆ.



# ಹಣ ಹೂಡಲು ಸಕಾಲ

## ಜಿಡಿಪಿ ಏರುತ್ತಿದ್ದಂತೆ ಮಾರುಕಟ್ಟೆಯೂ ಏರಲಿದೆ

■ ಸಂದೀಪ್ ಜೆ ಪಿಸ್ಸೆ

ಮಾರುಕಟ್ಟೆಯ ಸೂಚ್ಯಂಕ ಹೊಸ ಏರಿಕೆಯನ್ನು ಕಂಡಿದೆ. ಇದುವರೆಗಿನ ಎಲ್ಲಾ ದಾಖಲೆಗಳನ್ನು ಷೇರು ಮಾರುಕಟ್ಟೆಯು ಮುರಿದಿದೆ. ಸೂಚ್ಯಂಕ ಏರುತ್ತಿದ್ದಂತೆಯೇ ಹೊಸ ಹೊಸ ಮಾರ್ಕೆಟ್ ಗುರುಗಳು ಹುಟ್ಟುತ್ತಿದ್ದಾರೆ ಮತ್ತು ತಮ್ಮದೇ ಆದ ಕಥೆಗಳನ್ನು ಹೆಣೆಯುತ್ತಿದ್ದಾರೆ. ಮಾರುಕಟ್ಟೆ ಏರಲಿದೆ ಎಂದು ಅಭಿಪ್ರಾಯಿಸುತ್ತಿದ್ದಾರೆ. ಆದರೆ ಏಕೆ ಮತ್ತು ಹೇಗೆ ಸೂಚ್ಯಂಕ ಏರಲಿದೆ ಎಂದು ಮಾತ್ರ ಅವರು ವಿವರಿಸುತ್ತಿಲ್ಲ.

ವಿಶ್ವದ ರಾಷ್ಟ್ರಗಳ ಜಿಡಿಪಿ ಬಹಳ ಕಡಿಮೆ ಇದ್ದಾಗ ಕೂಡಾ ನಮ್ಮ ದೇಶದ ಜಿಡಿಪಿ ಮಾತ್ರ ಧನಾತ್ಮಕವಾಗಿತ್ತು. ಕೇಂದ್ರದಲ್ಲಿ ಏಕಪಕ್ಷೀಯ ಸದೃಢ ಹಾಗೂ ಬಲಿಷ್ಟ ಸರ್ಕಾರ ಅಧಿಕಾರಕ್ಕೆ ಬಂದಿರುವುದರಿಂದ ಹಾಗೂ ಈ ಸರ್ಕಾರದ ಮುಖ್ಯ ಘೋಷಣೆಯೇ ಸಮೃದ್ಧ ಭಾರತ ಎಂದಿರುವುದರಿಂದ ಇದು ಮತ್ತಷ್ಟು ಸುಧಾರಣೆ ಕಾಣಬಹುದು. ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯ ಫಲಿತಾಂಶ ಮಾರುಕಟ್ಟೆಯ ಸೂಚ್ಯಂಕದ ಏರಿಕೆಗೆ ಉತ್ತಮ ಸಂಕೇತವನ್ನು ನೀಡಿದೆ. ಕೆಲವು ಮಾರ್ಕೆಟ್‌ಗುರುಗಳು ಸೂಚ್ಯಂಕ 40000 ದ ಗಡಿಯನ್ನು ದಾಟುತ್ತದೆಯೆಂದರೆ, ಇನ್ನು ಕೆಲವರು 60000 ದ ಗಡಿ ದಾಟಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಜಿಡಿಪಿ ಮತ್ತು ಮಾರುಕಟ್ಟೆ ಬಂಡವಾಳದ ಅನುಪಾತವನ್ನು ಮನಸ್ಸಿನಲ್ಲಿಟ್ಟುಕೊಂಡು ಸೂಚ್ಯಂಕ ಮಟ್ಟ ಸಾಧ್ಯತೆಗಳನ್ನು ಒಂದು ತಾರ್ಕಿಕ ವಿವರಣೆಯಿಂದ ಅರ್ಥ ಮಾಡಿಕೊಳ್ಳೋಣ. ಜಗತ್ತಿನ ಸುಪ್ರಸಿದ್ಧ ಇನ್ವೆಸ್ಟ್‌ಮೆಂಟ್ ಗುರು ಎಂದೇ ಹೆಸರಾದ ವಾರೆನ್ ಬಫೆಟ್ ಮಾರುಕಟ್ಟೆಯ ಮೌಲ್ಯವನ್ನು ತಿಳಿದುಕೊಳ್ಳಲು ಬಳಸುತ್ತಿದ್ದ ವಿಧಾನವಿದು. ಇತಿಹಾಸವನ್ನು ಗಮನಿಸಿದರೆ ಮಾರುಕಟ್ಟೆಯ ಸೂಚ್ಯಂಕ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ನಿರಂತರವಾಗಿ ಏರುತ್ತಲೇ ಹೋಗುವುದಿಲ್ಲ. ಅಲ್ಲಲ್ಲಿ ಇಳಿತಗಳು ಇರುತ್ತದೆ ಕೂಡ. ಈ ವಿಶ್ಲೇಷಣೆ ದೀರ್ಘ ಕಾಲದ ಸಾಧ್ಯತೆಗಳನ್ನು ನೀಡುತ್ತದೆ.

ನಮ್ಮ ದೇಶದ ಜಿಡಿಪಿ ಕಳೆದ ನಾಲ್ಕು ವರುಷಗಳಲ್ಲಿ ಎರಡೂವರೆ ಪಟ್ಟಿನಷ್ಟು ಹೆಚ್ಚಾಗಿದೆ. ಇದು ಅತ್ಯದ್ಭುತವಾದ ಅಭಿವೃದ್ಧಿಯಾಗಿದ್ದು, ಈಗಿನ ಗಾತ್ರವನ್ನು ನೋಡಿದರೆ ಪ್ರಪಂಚದ ಹತ್ತು ರಾಷ್ಟ್ರಗಳಲ್ಲಿ ನಮ್ಮ ದೇಶವೂ ಕೂಡಾ ಒಂದಾಗಿದೆ.

ಪುಟ 3

### Sensex levelನ ಸಾಧ್ಯತೆಗಳು

| ವರ್ಷ | ಉತ್ತಮ ಸನ್ನಿವೇಶ | ಕೆಟ್ಟ ಸನ್ನಿವೇಶ | ನೈಜ ಸನ್ನಿವೇಶ |
|---|---|---|---|
| 2014 | 53061 | 14150 | 31837 |
| 2015 | 55714 | 14857 | 33428 |
| 2016 | 59057 | 15748 | 35434 |
| 2017 | 63191 | 16851 | 37914 |
| 2018 | 67930 | 18115 | 40758 |
| 2019 | 73364 | 19564 | 44019 |
| 2020 | 79600 | 21227 | 47760 |
| 2021 | 86764 | 23137 | 52059 |
| 2022 | 94139 | 25104 | 56484 |
| 2023 | 101671 | 27112 | 61002 |
| 2024 | 108788 | 29010 | 65273 |
| 2025 | 115859 | 30896 | 69515 |
| 2026 | 123390 | 32904 | 74034 |
| 2027 | 131410 | 35043 | 78846 |

ನಮ್ಮ ರಾಷ್ಟ್ರದ ಜನರ ಮಹತ್ವಾಕಾಂಕ್ಷೆ ಮತ್ತು ಸಾಮರ್ಥ್ಯವನ್ನು ಅವಲೋಕಿಸಿದಾಗ ನಮ್ಮ ದೇಶ ಈಗಲೂ ಕೂಡಾ ಶೇ. 7ಕ್ಕಿಂತ ಜಾಸ್ತಿ ಅಭಿವೃದ್ಧಿಯನ್ನು ಹೊಂದಬಹುದು. ಒಂದು ವೇಳೆ ನಾವು ಶೇ.7 ರಷ್ಟು ಅಭಿವೃದ್ಧಿಯತೆ ಪ್ರತೀ ವರ್ಷ ಮುಂದುವರಿದರೆ, 2024ರ ಬದಲು 2027 ರ ಹೊತ್ತಿಗೆ ನಮ್ಮ ಜಿಡಿಪಿ ಐದು ಟ್ರಿಲಿಯನ್ ಡಾಲರ್ ತಲುಪುವುದು ನಿಸ್ಸಂದೇಹ.

## ಮ್ಯಾನೇಜ್‌ಮೆಂಟ್ ಕತೆಗಳು

■ ಸೀಮ

# ನಿಮ್ಮ ಬೆಲೆ ಎಷ್ಟು?

**ನಿನ್ನೆಯ ಬೇಸರಗಳು ನಾಳೆಯ ಕನಸುಗಳನ್ನು ಹೊಸಕಿಹಾಕಲು ಬಿಡಬಾರದು. ನಾವು ನಮ್ಮ ಬಗ್ಗೆ ಏನು ಅಂದುಕೊಳ್ಳುತ್ತೇವೋ ಅದೇ ನಾವು. ನಮ್ಮಿಂದ ಇದು ಸಾಧ್ಯ ಎಂಬ ನಂಬಿಕೆಯಿದ್ದರೆ ಖಂಡಿತ ಅದು ಸಾಧ್ಯವಾಗುತ್ತದೆ.**

ರಿಸೆಷನ್ ಸಮಯದಲ್ಲಿ ಪ್ರತಿಷ್ಠಿತ ಕಂಪನಿಯೊಂದರಿಂದ 2000 ಜನರನ್ನು ಕೆಲಸದಿಂದ ಕಿತ್ತುಹಾಕಿದ್ದರು. ದಿನಕ್ಕೊಬ್ಬರು ಮನೆಗೆ ಹೋಗುತ್ತಿರುವುದನ್ನು ನೋಡಿ ಇನ್ನುಳಿದ ನೌಕರರು ಕಂಗಾಲಾಗಿದ್ದರು. ನಮ್ಮನ್ನು ಯಾವತ್ತು ಕಿತ್ತುಹಾಕುತ್ತಾರೋ ಎಂಬ ಆತಂಕ ಅವರಿಗಿತ್ತು. ಆಫೀಸು ದಿನದಿಂದ ದಿನಕ್ಕೆ ಖಾಲಿಯಾಗುತ್ತಿರುವುದನ್ನು ನೋಡಿ ನಾವೆಲ್ಲ ನಿಷ್ಪ್ರಯೋಜಕರು ಎಂಬ ಭಾವನೆ ಮೂಡತೊಡಗಿತ್ತು. ಆದರೆ, ಅವರನ್ನು ಕಿತ್ತುಹಾಕುವ ಯೋಚನೆ ಕಂಪನಿಗಿರಲಿಲ್ಲ. ಆದರೂ, ನೌಕರರು ತಮ್ಮಷ್ಟಕ್ಕೆ ತಾವೇ ಡೀಮೋಟಿವೇಟ್ ಆಗಿ ಉತ್ಸಾಹ ಕಳೆದುಕೊಂಡಿದ್ದರು.

ಇಂತಹ ಸಂದರ್ಭದಲ್ಲಿ ಎಚ್‌ಆರ್ ವಿಭಾಗದವರಿಗೆ ಕಾಣಿಸುವುದು ಮ್ಯಾನೇಜ್‌ಮೆಂಟ್ ಗುರುಗಳು. ಪ್ರಸಿದ್ಧ ಮಾತುಗಾರರೊಬ್ಬರನನ್ನು ಕರೆಸಿ ಈ ನೌಕರರಿಗೆಲ್ಲ ಒಂದು ಭಾಷಣ ಏರ್ಪಡಿಸಲಾಯಿತು.



ಭಾಷಣಕಾರ 1000 ರೂ.ನ ನೋಟೊಂದನ್ನು ಕೈಲಿ ಹಿಡಿದುಕೊಂಡು ಮಾತು ಶುರುಮಾಡಿದ. 'ಯಾರಿಗೆ ಈ ನೋಟು ಬೇಕು?'

ಎಲ್ಲರೂ ಕೈ ಎತ್ತಿದರು.

'ಯಾರಾದರೂ ಒಬ್ಬರಿಗೆ ಕೊಡುತ್ತೇನೆ. ಆದರೆ ಅದಕ್ಕೂ ಮುನ್ನ ಇದನ್ನು ಹೀಗೆ ಮಾಡುತ್ತೇನೆ' ಎಂದು ಮುದ್ದೆ ಮಾಡತೊಡಗಿದ.

'ಈಗ ಯಾರಿಗೆ ಬೇಕು?'

ಮತ್ತೆ ಎಲ್ಲರೂ ಕೈ ಎತ್ತಿದರು.

ಭಾಷಣಕಾರ ಆ ನೋಟನ್ನು ನೆಲಕ್ಕೆ ಹಾಕಿ ಧೂಳಿನಲ್ಲಿ ಗಸಗಸ ಉಜ್ಜಿದ. ನಂತರ ಅದನ್ನು ಕೈಲಿ ಹಿಡಿದುಕೊಂಡು ಕೇಳಿದ. 'ಈಗ ಯಾರಿಗೆ ಬೇಕು?'

ಮತ್ತೆ ಎಲ್ಲರೂ ಕೈ ಎತ್ತಿದರು.

'ಫ್ರೆಂಡ್ಸ್, ನೀವು ಇದರಿಂದ ಒಂದು ಪಾಠ ಕಲಿಯಬೇಕು. ನಾನು ಸಾವಿರ ರೂ. ನೋಟಿಗೆ ಏನು ಮಾಡಿದರೂ ನಿಮಗೆ ಅದರ ಮೇಲಿನ ಆಸೆಯೇನೂ ಇಳಿಯಲಿಲ್ಲ. ಏಕೆಂದರೆ ಅದರ ಬೆಲೆ ಸಾವಿರ ರೂಪಾಯಿಯೇ ಆಗಿತ್ತು.

ನಮಗೂ ಬದುಕಿನಲ್ಲಿ ಹೀಗಾಗುತ್ತದೆ. ಆಫೀಸು ನಮ್ಮನ್ನು ಹಿಂಡಿ ಹಿಪ್ಪೆ ಮಾಡಿರಬಹುದು. ಮನೆಯಲ್ಲಿನ ಸಮಸ್ಯೆ ನಮ್ಮನ್ನು ನೆಲಕ್ಕೆ ಬೀಳಿಸಿ ಉಜ್ಜಾಡಿರಬಹುದು. ಹೊರಗೆ ಯಾರೋ ಅವಮಾನ ಮಾಡಿರಬಹುದು. ಇನ್ನು ನನ್ನ ಬದುಕಿನಲ್ಲಿ ಏನೂ ಉಳಿದಿಲ್ಲ ಎಂದು ನಿಮಗೆ ಅನ್ನಿಸುತ್ತಿರಬಹುದು. ಕೊನೆಗೆ, ನನಗೆ ಬೆಲೆಯೇ ಇಲ್ಲ ಎಂಬ ತೀರ್ಮಾನಕ್ಕೆ ನೀವು ಬರಬಹುದು. ಆದರೆ ನೆನಪಿಡಿ, ನಿಮಗೆ ಏನೇ ಆದರೂ ನಿಮ್ಮ ಬೆಲೆಯನ್ನು ನೀವು ಕಳೆದುಕೊಳ್ಳುವುದಿಲ್ಲ. ನಿಮಗೊಂದು ಬೆಲೆ ಇದ್ದೇ ಇರುತ್ತದೆ. ಅದನ್ನು ಸರಿಯಾಗಿ ಬಳಸಿಕೊಳ್ಳುವುದು ಹೇಗೆಂಬುದನ್ನು ಕಂಡುಕೊಳ್ಳಬೇಕಷ್ಟೆ. ■

## ಕಾರ್ಡು ನಂಬಿದವರಿಗೆ ಫೈನು ಕಾದಿದೆ ಮುಂದೇನು ದಾರಿ ಇದೆ?

**ಎಲ್ಲಾ ಬ್ಯಾಂಕ್‌ಗಳು ಎಟಿಎಂನಲ್ಲೇ ವ್ಯವಹಾರ ಮಾಡಿ, ಚೆಕ್‌ಬುಕ್ ಮುಟ್ಟಬೇಡಿ ಅಂತಿವೆ. ಇನ್ನೊಂದು ಕಡೆ ಎಂಟಿಎಂ ವಹಿವಾಟಿನ ಮೇಲೆ ವಂತಿಗೆ ಹೇರಲು ರೆಡಿಯಾಗುತ್ತಿದೆ. ಎಟಿಎಂ ರುಚಿ ತೋರಿಸಿ ಈಗ ಅದರಿಂದಲೇ ಲಾಭ ಮಾಡುವ ಬ್ಯಾಂಕ್‌ಗಳ ಮರ್ಮ ಏನು ಗೊತ್ತಾ?**



# ಎಟಿಎಂ ಸತ್ಯಗಳು

■ ರಾಮಸ್ವಾಮಿ ಕಳಸವಳ್ಳಿ

ಗ್ರಾಹಕರನ್ನು ಸೆಳೆಯಲು ನಾನಾ ಕಸರತ್ತು. ಅದು ಮಾಲಲ್ಲೇ ಆಗಿರಬಹುದು, ಕೆ.ಆರ್ ಮಾರ್ಕೆಟ್‌ನಲ್ಲೇ ಆಗಿರಬಹುದು, ನಮ್ಮ ಬ್ಯಾಂಕ್‌ಗಳಲ್ಲೇ ಆಗಿರಬಹುದು. ಯಾರಲ್ಲೂ ವ್ಯತ್ಯಾಸವಿಲ್ಲ.

ಎಟಿಂ ಕೂಡ ಈ ಸೆಳೆತದ ಒಂದು ಕೊಂಡಿ. ಮೊದಲು ಎಟಿಎಂ ಕಾರ್ಡುಗಳನ್ನು ಪುಕ್ಕಟೆ ಕೊಡುತ್ತೇನೆ ಎಂದ ಬ್ಯಾಂಕುಗಳು ನಂತರ ತಮ್ಮ ವರಸೆಯನ್ನು ಬದಲಾಯಿಸಿ ಒಂದು ವರ್ಷದ ನಂತರ ಕಾರ್ಡಿಗೆ ವರ್ಷಕ್ಕೆ ನೂರೋ ನೂರೈವತ್ತೋ ಶುಲ್ಕ ಹಾಕಲಾರಂಭಿಸಿತು. ಎಟಿಎಂಗೆ ಒಗ್ಗಿದ ಗ್ರಾಹಕ ಅದನ್ನು ಸೈರಿಸಿಕೊಂಡು ಆ ಸೇವೆಯನ್ನು ಪಡೆಯುತ್ತಿದ್ದಾನೆ. ನಂತರ ಆಯಾ ಬ್ಯಾಂಕಿನ ಎಟಿಎಂ ಗ್ರಾಹಕರಿಗೆ ಅವರ ಬ್ಯಾಂಕಿನ ಎಟಿಎಂಗಳಲ್ಲಿ ಹಣ ಹಿಂಪಡೆಯಲು ಉಚಿತ ಉಳಿದ ಬ್ಯಾಂಕುಗಳ ಎಟಿಎಂಗಳಲ್ಲಿ ಹಣ ತೆಗೆಯಲಿ, ಬ್ಯಾಲೆನ್ಸ್ ಪರೀಕ್ಷಿಸಲಿ ಒಟ್ಟು ತಿಂಗಳಿಗೆ ಐದುಬಾರಿ ಮಾತ್ರ ಪುಕ್ಕಟೆ ಎಂದಾಗಿತ್ತು. ಈಗ ಅದಕ್ಕೂ ಕಲ್ಲು ಬಿದ್ದಿದೆ. ನವೆಂಬರ್ ಒಂದರಿಂದ ಇವೆಲ್ಲಾ ದುಬಾರಿ. ಯಾವಾಗಬೇಕೆಂದರೆ ಆವಾಗ ಎಟಿಎಂಗಳಲ್ಲಿ ಹಣ ತೆಗೆದರೆ ಅದಕ್ಕೂ ಶುಲ್ಕ ಹಾಕುತ್ತವೆ ಬ್ಯಾಂಕುಗಳು. ಇದು ಆರ್‌ಬಿಐ ಇತ್ತೀಚೆಗೆ ಹೊರಡಿಸಿದ ಪ್ರಕಟಣೆ.

### ಬ್ಯಾಂಕುಗಳು ಏನು ಹೇಳುತ್ತವೆ?

ಎಟಿಎಂ ಏಕೆ ಬಂದದ್ದು? ಗ್ರಾಹಕ ಬ್ಯಾಂಕಿಗೆ ಬಂದು ಚಕ್ ಬರೆದು ಹಣ ಹಿಂಪಡೆದರೆ ಅದಕ್ಕೆ ಬೇಕಾಗುವ ಸಿಬ್ಬಂದಿ. ಸ್ಟೇಷನರಿ ಮುಂತಾದುವಕ್ಕೆ ತಗಲುವ ಖರ್ಚು ಸಮಯಕ್ಕೆ ಪರ್ಯಾಯವಾಗಿ ಎಟಿಎಂಗಳಲ್ಲಿ ಗ್ರಾಹಕ ಹಣ ಹಿಂಪಡೆದರೆ ಅದೆಷ್ಟೋ ಲಾಭ. ಹೀಗೆ ಲೆಕ್ಕಹಾಕಿದ ಬ್ಯಾಂಕುಗಳು ಎಟಿಎಂ ಸ್ಥಾಪಿಸಿದವು.

ಯಾವ ಬ್ಯಾಂಕಿನ ಎಟಿಎಂಗಳಲ್ಲಿಯಾದರೂ ಹಣ ಪಡೆಯುವ ಅವಕಾಶ ಗ್ರಾಹಕನಿಗಿದೆ. ಆದರೆ ಬ್ಯಾಂಕುಗಳು ತಮ್ಮ ಒಳ ಒಪ್ಪಂದಗಳ ಪ್ರಕಾರ ಗ್ರಾಹಕ ಮಾಡಿದ ಪ್ರತಿ ಎಟಿಎಂ ವ್ಯವಹಾರಕ್ಕೂ ಶುಲ್ಕವಿನಿಮಯ ಮಾಡಿಕೊಳ್ಳುತ್ತವೆ. ಹಾಗಾಗಿ ಉತ್ತಮ ಜಾಗದಲ್ಲಿಎಟಿಎಂ ಸ್ಥಾಪಿಸಲು ಬ್ಯಾಂಕುಗಳು ಪೈಪೋಟಿ ನಡೆಸುತ್ತವೆ. ಅಲ್ಲಿ ಬೇರೆ ಬ್ಯಾಂಕಿನ ಎಟಿಎಂ ಕಾರ್ಡಿನಿಂದ ಗ್ರಾಹಕ ಹಣ ಹಿಂಪಡೆದರೆ ಗ್ರಾಹಕ ಯಾವ ಬ್ಯಾಂಕಿನಲ್ಲಿ ಖಾತೆಹೊಂದಿದ್ದಾನೋ ಆ ಬ್ಯಾಂಕು ಎಟಿಎಂ ಸ್ಥಾಪಿಸಿದ ಬ್ಯಾಂಕಿಗೆ ಆ ವ್ಯವಹಾರಕ್ಕೆ ಇಂತಿಷ್ಟು ಎಂದು ಶುಲ್ಕನೀಡಬೇಕಾಗುತ್ತದೆ.

ಎಟಿಎಂ ಸ್ಥಾಪಿಸಲು ತಗಲುವ ವೆಚ್ಚವನ್ನು ನೋಡಿ– ಎಟಿಎಂ ಯಂತ್ರಕ್ಕೆ ನಾಲ್ಕರಿಂದ ಆರು ಲಕ್ಷ ದರವಿದೆ. ಇದಕ್ಕೆ ಸುಮಾರು1,600 ಚದರಡಿ ಜಾಗ ಬೇಕಿದ್ದು ಅದರ ಬಾಡಿಗೆ ತಿಂಗಳೊಂದಕ್ಕೆ ಐದು ಸಾವಿರದಿಂದ ಐವತ್ತು ಸಾವಿರದವರೆಗೂ ಇದೆ. ರಕ್ಷಣಾ ಸಿಬ್ಬಂದಿ, ವಿದ್ಯುತ್ ಇನ್ನಿತರೇ ನಿರ್ವಹಣಾ ವೆಚ್ಚವೆಂದು ತಿಂಗಳಿಗೆ ಒಂದು ಲಕ್ಷ ಬೇಕಾಗುತ್ತದೆ. ಇದನ್ನೆಲ್ಲಾ ಗ್ರಾಹಕರ ಮೇಲೆ ಹಾಕಬೇಕು ತಾನೆ? ಅದಕ್ಕಾಗಿ ಬ್ಯಾಂಕುಗಳ ಒಕ್ಕೂಟ ಐಬಿಎ ಮುಖಾಂತರ ರಿಸರ್ವ್‌ಬ್ಯಾಂಕಿಗೆ ರಕ್ಷಣಾ ಸಿಬ್ಬಂದಿಯ ನೆಪವೊಡ್ಡಿ ಎಟಿಎಂನಲ್ಲಿ ಗ್ರಾಹಕ ಹಣ ಹಿಂಪಡೆಯುವುದಕ್ಕೆ ಶುಲ್ಕಹಾಕಲು ಅವಕಾಶ ನೀಡುವಂತೆ ಕೇಳಿದ್ದವು. ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳಿಗಿಂತ ನಗರ ಮಹಾ ನಗರಗಳಲ್ಲಿ ನಿರ್ವಹಣಾ ವೆಚ್ಚ ಅಧಿಕವಾಗಿರುವುದರಿಂದ ಅಂಥ ಪ್ರದೇಶಗಳಲ್ಲಿ ಬೇರೇ ಬ್ಯಾಂಕಿನ ಕಾರ್ಡುಗಳಿಂದ ಹಣ ತೆಗೆದರೆ ಎಲ್ಲಾ ಹಿಂಪಡೆತಕ್ಕೂ ಶುಲ್ಕಹಾಕಲು ಅವಕಾಶ ನೀಡುವಂತೆಯೂ ಕೋರಿದ್ದವು.

ಪುಟ 2


